# ದಿನಾಂಕ:08-11-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್-121 ಹಳೇ ತಿಪ್ಪಸಂದ್ರ ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-121 ಹಳೇ ತಿಪ್ಪಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ:08-11-2022 ರಂದು ಬೆಳ್ಳಿಗ್ಗೆ 11:00 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಅಭಿಶೇಕ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಅಭಿಶೇಕ್- ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-121
2. ಶ್ರೀ.ಶ್ರೀನಿವಾಸ್.ವಿ (ಪ್ರಭಾರ) -ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ.ಮಧು.ಎಸ್.ಎಂ-ವಾರ್ಡ್ ಮಾರ್ಷಲ್
4. ಶ್ರೀ.ತಿಮ್ಮಪ್ಪ ಅರಣ್ಯ ಇಲಾಖೆ

**ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳು**

1. ಶ್ರೀಸತೀಶ್ ರಾವ್- ಸದಸ್ಯರು
2. ಶ್ರೀಮತಿ.ಚಿತ್ರಾ ಶೇಶಾದ್ರಿ - ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
3. ಶ್ರೀ.ಸುಬ್ಬಣ್ಣ - ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಶ್ರೀನಿವಾಸ್ ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂದಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- 13ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ ಹಾಗೂ 4ನೇ ಅಡ್ಡರಸ್ತೆ ಗಳ ಪದಚಾರಿ ಮಾರ್ಗಗಳನ್ನು ದುರಸ್ಥಿಗೊಳಿಸಲು ಸಭೆಯಲ್ಲಿ ಕೋರಿದರು.
- ಹೆಚ್.ಎ.ಎಲ್ 2ನೇ ಹಂತ, 13ನೇ 'ಬಿ' ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಸಭೆಯಲ್ಲಿ ಕೋರಿದರು.
- ಹೆಚ್.ಎ.ಎಲ್ 2ನೇ ಹಂತ 12ನೇ ಎ ಮುಖ್ಯರಸ್ತೆ, 8ನೇ ಅಡ್ಡರಸ್ತೆ ಮತ್ತು 13ನೇ ಮುಖ್ಯರಸ್ತೆಯ ಮುಂಭಾಗದಲ್ಲಿ ಬ್ಲಾಕ್‌ಸ್ಪಾಟ್‌ಗಳನ್ನು ತಡೆಗಟ್ಟಲು ಮಾರ್ಷಲ್‌ಗಳನ್ನು ನಿಯೋಜಿಸಲು ಸಬೆಯಲ್ಲಿ ಕೋರಿದರು.
- ಹೆಚ್.ಎ.ಎಲ್ 2ನೇ ಹಂತ 14ನೇ ಮುಖ್ಯರಸ್ತೆ ಮುಂಭಾಗದ Kreo Design 13ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆಯಲ್ಲಿ ಬೃಹತ್ ನೀರುಗಾಲುವೆಯ ಕ್ರಮ ಕೈಗೊಳ್ಳಲು ಕೋರಿದರು.
- ಬಿ.ಎಸ್.ಎನ್.ಎಲ್ ಕಡೆ 13ನೇ ಮುಖ್ಯರಸ್ತೆ ಮತ್ತು 8ನೇ ಅಡ್ಡರಸ್ತೆಗಳಲ್ಲಿ ಚರಂಡಿಗಳಲ್ಲಿ ಹೂಳನ್ನು ತೆಗೆದು ಸ್ವಚ್ಛಗೊಳಿಸಲು ಹಾಗೂ ಚರಂಡಿಗಳಲ್ಲಿ ಬರುವ ದುರ್ವಾಸನೆಯನ್ನು ತಡೆಗಟ್ಟಲು ಕೋರಿದರು.
- ದೇವಸ್ಥಾನ ಮತ್ತು ಗ್ರಾಫೈಟ್ ಅಪಾರ್ಟ್‌ಮೆಂಟ್ ನಡುವಿನ 8ನೇ ಅಡ್ಡರಸ್ತೆಯಲ್ಲಿ ಖಾಲಿ ಇರುವ ಉದ್ಯಾನವನ್ನು ಸ್ಥಾಪಿಸಲು, ಸದರಿ ಉದ್ಯಾನವನದಲ್ಲಿ ಜಿಮ್ ಯಂತ್ರಗಳನ್ನು ಅಳವಡಿಸಲು ಹಾಗೂ ಉದ್ಯಾನವನಕ್ಕೆ ಫೆನ್ಸಿಂಗ್ ಹಾಕಲು ಸಭೆಯಲ್ಲಿ ಕೋರಿದರು.

- 8ನೇ ಅಡ್ಡರಸ್ತೆಯಲ್ಲಿ 13ನೇ ಎ ಮುಖ್ಯರಸ್ತೆ ಕಾರ್ನರ್ ಅಪಾಯಕಾರಿ ಸ್ಥಳವಾಗಿದ್ದು, ಇಲ್ಲಿ ಅಪಘಾತವಾಗುವ ಸಂಭವ ಹೆಚ್ಚಾಗಿರುವುದರಿಂದ ಇಲ್ಲಿ ರಸ್ತೆ ಹುಬ್ಬರಗಳನ್ನು ನಿರ್ಮಿಸಲು ಹಾಗೂ ಹಾಲಿ ಇರುವ ರಸ್ತೆ ಹುಬ್ಬರಗಳು ಘೋಚರಿಸುವಂತೆ ಚಿತ್ರಿಸಲು ಕೋರಿದರು.

- ವಾರ್ಡ್ ವ್ಯಾಪ್ತಿಯ ಎಲ್ಲಾ ಮುಖ್ಯರಸ್ತೆಗಳಲ್ಲಿ ಪಾರ್ಕಿಂಗ್ ಮತ್ತು ಏಕಮುಖ ಚಿನ್ಹೆಗಳನ್ನು ಅಳವಡಿಸಲು ಕೋರಿದರು.

- 8ನೇ ಅಡ್ಡರಸ್ತೆ, 13ನೇ ಎ ಮುಖ್ಯರಸ್ತೆ, 1ನೇ ಅಡ್ಡರಸ್ತೆ ಮತ್ತು 13ನೇ ಎ ಮೈನ್ 80 ಅಡಿರಸ್ತೆಯ ನ ಹತ್ತಿರ ಇರುವ ಖಾಲಿ ಜಾಗದಲ್ಲಿ ಡೆಬ್ರೀಸ್‌ಗಳನ್ನು ಹಾಗೂ ಕಟ್ಟಡದ ಅವಶೇಷಗಳನ್ನು ಹಾಕಿದ್ದು, ಇದನ್ನು ತೆರವುಗೊಳಿಸಲು ಕೋರಿದರು.

- ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಎಲ್ಲಾ ಇಲಾಖೆಯ ಅಧಿಕಾರಿ/ನೌಕರರು ತಪ್ಪದೇ ಹಾಜರಾಗಲು ನೋಡೆಲ್ ಅಧಿಕಾರಿಗಳು ಹಾಗೂ ಸಾರ್ವಜನಿಕರು ತಿಳಿಸಿದರು.

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ಹಾಜರುಪಡಿಸಲು ತಿಳಿಸಿ ಮತ್ತು ಮುಂದಿನ ಸಭೆಗೆ ತೋಟಗಾರಿಕಾ ಇಲಾಯವರು, ಪೊಲೀಸ್ ಇಲಾಖೆ(ಕಾ &ಸು) ಮತ್ತು ಸಂಚಾರ ಇಲಾಖೆರವರು ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ಕ್ರಮ ವಹಿಸಲು ಕಾರ್ಯದರ್ಶಿರವರಿಗೆ ಸೂಚಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

I.C. V. [signature] AE
ಕಾರ್ಯದರ್ಶಿಗಳು
ವಾರ್ಡ್ ಸಮಿತಿ–121

[signature]
ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 121
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 121